## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 776/2024

**ಸಾಕ್ಷಿಯನ್ನು ದಿಃ 27.10.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಸ್ವಾಮಿ.ಎಸ್ | ಸಿಡಬ್ಲ್ಯೂಃ 1 | ಪಿಡಬ್ಲ್ಯೂಃ 1 |
| ತಂದೆಯ ಹೆಸರು | ಲೇಟ್ ಶಿವರಾಮು | | |
| ವಯಸ್ಸು | 36 ವರ್ಷ | | |
| ಕೆಲಸ | ಆಟೋ ಚಾಲಕ | | |
| ವಾಸಸ್ಥಳ | ರಂಗನಾಥಬಡಾವಣೆ,<br>ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-2 ನನ್ನ ತಾಯಿ. ಚಾಸಾ-3 ರಿಂದ 6 ಗೊತ್ತು. ಆರೋಪಿತರು ಗೊತ್ತು. (ಆರೋಪಿತರು ಗೈರು ಹಾಜರಿದ್ದು, ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ.) ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಆರೋಪಿತರು ನನ್ನ ಮೇಲೆ ಮಾಡಿದ ಗಲಾಟೆಯ ಸಮಯದಲ್ಲಿ ಕೊಟ್ಟ ದೂರಿಗೆ ಹಾಕಿದ್ದೇನೆ. ದಿಃ 02.12.2023 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ನಾನು ಮಗನನ್ನು ಕರೆದುಕೊಂಡು ವಾಕಿಂಗ್ ಹೋಗಿದ್ದೆ. ವಾಕಿಂಗ್ ಮುಗಿಸಿಕೊಂಡು ಮನೆಗೆ ವಾಪಸ್ಸು ಬರುತ್ತಿರುವಾಗ 1ನೇ ಆರೋಪಿಯು ಹೋಂಡಾ ಶೈನ್ ಬೈಕಿನಲ್ಲಿ ಬಂದು ನನಗೆ ಗುದ್ದಿದ. ಅದರಿಂದ ನನಗೆ ನೋವುಂಟಾಯಿತು. ಅದನ್ನು ನಾನು ಪ್ರಶ್ನೆ ಮಾಡಿದ್ದಕ್ಕೆ 1ನೇ ಆರೋಪಿ ನನಗೆ ಜಾಡಿಸಿ ಒದ್ದ. ನಾನು ಮಗನನ್ನುಕರೆದುಕೊಂಡು ಮನೆಗೆ ಬಂದೆ. ಅದೇ ದಿನ ಬೆಳಿಗ್ಗೆ 7.35 ರಿಂದ 7.40 ಗಂಟೆ ಸಮಯದಲ್ಲಿ ಆರೋಪಿತರು ನನ್ನ ಮನೆಯ ಬಳಿ ಬಂದು ನನ್ನ ಮಕ್ಕಳನ್ನು ಉದ್ದೇಶಿಸಿ ಸೂಳೆ ಮಕ್ಕಳಾ ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದರು. ನಿಮ್ಮ ಅಪ್ಪ ಎಲ್ಲಿದ್ದರೂ ಬಿಡುವುದಿಲ್ಲ. ಕೊಲೆ ಮಾಡುವುದಾಗಿ ಬೆದರಿಕೆ

ಹಾಕಿದರು. ಆಗ ನನ್ನ ಮಕ್ಕಳು. ನನ್ನ ಬಳಿ ಬಂದು ಯಾರೋ ನಿಮ್ಮನ್ನು ಬೈಯುತ್ತಿದ್ದಾರೆ ಬನ್ನಿ ಎಂದು ಕರೆದರು. ನಾನು ಆಗ ಮನೆಯಿಂದ ಹೊರಗೆ ಬಂದೆ. ಆಗ ನನ್ನ ತಾಯಿ ಚಾಸಾ-2 ರವರು ಅಡ್ಡಬಂದು ಯಾಕೆ ಈ ರೀತಿ ನನ್ನ ಮಗನನ್ನು ಬೈಯುತ್ತಿದ್ದಿರಾ ಎಂದು ಕೇಳಿದರು. ಆಗ ಆರೋಪಿತರು ಚಾಸಾ-2 ರವರನ್ನು ಜೋರಾಗಿ ತಳ್ಳಿದರು. ಇದರಿಂದ ಅವರಿಗೆ ಪ್ರಜ್ಞೆ ತಪ್ಪಿತ್ತು. ನಂತರ ಆರೋಪಿತರು ನನ್ನನ್ನು ಎಳೆದುಕೊಂಡು ದೊಣ್ಣೆ ಮತ್ತು ಕಲ್ಲುಗಳಿಂದ ಮೈಕೆಗೆ ಹೊಡೆದು ನೋವುಂಟು ಮಾಡಿದರು. ನಂತರ ನನ್ನ ಕತ್ತನ್ನು ಹಿಸುಕಿ ಉಸಿರುಗಟ್ಟಿಸಲು ಪ್ರಯತ್ನಿಸಿದರು. ಆಗ ನನ್ನ ತಾಯಿ ಬಿಡಿಸಲು ಬಂದರು. ನನ್ನ ತಾಯಿಯ ಬಲಗೈಯನ್ನು ನುಲಿಚಿ ನೋವುಂಟು ಮಾಡಿದರು. ನಂತರ ನಾನು ಚಾಸಾ-2 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಗೆ ದಾಖಲಿಸಿದೆ. ವೈದ್ಯರ ಸಲಹೆಯ ಮೇರೆಗೆ ಹೊರಗಿನಿಂದ ಔಷಧಿ ತೆಗೆದುಕೊಂಡು ಬರಲೆಂದು ನಾನು ಆಸ್ಪತ್ರೆಯಿಂದ ಹೊರಗೆ ಬಂದಾಗ, ಆರೋಪಿತರು ಪುನಃ ಬಂದು ನನ್ನನ್ನು ಉದ್ದೇಶಿಸಿ ನಮ್ಮ ಮೇಲೆ ಪೋಲೀಸ್ ಠಾಣೆಗೆ ದೂರು ಕೊಡುತ್ತಿಯಾ ಎಂದು ಹೇಳಿ ಅವರ ತಲೆಯಿಂದ ನನ್ನ ತಲೆಗೆ ಗುದ್ದಿ ಮುಖಕ್ಕೆ ಗುದ್ದಿ, ತುಟಿಗೆ ಗಾಯ ಮಾಡಿದರು. ಈ ಬಗ್ಗೆ ನಾನು ನನ್ನ ಪತ್ನಿಗೆ ಕರೆ ಮಾಡಿ ತಿಳಿಸಿದೆ. ಅವರು ಬೆಳವಾಡಿಯ ಗೋಕುಲದಾಸ್ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಾರೆ. ಮಕ್ಕಳನ್ನು ಮನೆಯಲ್ಲಿ ನೋಡಿಕೊಳ್ಳಲು ಬೇರೆ ಯಾರು ಇರಲಿಲ್ಲ. ನಂತರ ಘಟನೆಯ ಬಗ್ಗೆ ನಾನು ದಿಃ 02.12.2023 ರಂದು ರಾತ್ರಿ 8.30 ಗಂಟೆಗೆ ಪೋಲೀಸ್ ಠಾಣೆಗೆ ಹೋಗಿ ನಿಪಿ-1ರ ದೂರನ್ನು ನೀಡಿದೆ. ನನ್ನ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.MRH ವಕೀಲರಿಂದಃ**

ನಾನು SSLC ಓದಿದ್ದೇನೆ. ನಿಪಿ-1ರ ದೂರನ್ನು ಕಂಪ್ಯೂಟರ್ ಸೆಂಟರ್ ನಲ್ಲಿ ಸಂಜೆ 7.40 ಕ್ಕೆ ತಯಾರಿಸಿದ್ದೇನೆ. ನನ್ನ ಹೇಳಿಕೆಯ ಮೇರೆಗೆ ನಿಪಿ-1ರ ದೂರು ತಯಾರಾಗಿದೆ. ಗಲಾಟೆ ನಡೆಯಿತು ಎನ್ನುವ ಸಮಯ ಬೆಳಿಗ್ಗೆ 7.35 ರಿಂದ 7.40. ಗಲಾಟೆ ನಡೆಯಿತು ಎನ್ನುವ ನಿಖರವಾದ ಸ್ಥಳ ತಿಪ್ಪಲಾಪುರ ರಸ್ತೆ. ಅದು ಸಾರ್ವಜನಿಕ ರಸ್ತೆಯಾಗಿತ್ತು ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಘಟನೆ ನಡೆಯಿತು ಎನ್ನುವ ಸ್ಥಳದ ಚೆಕ್ಕುಬಂದಿ

ಹೇಳಲಾಗುತ್ತದೆಯೇ ಎಂದರೆ ದಿಕ್ಕುಗಳಲ್ಲಿ ಹೇಳಲು ಗೊತ್ತಾಗುವುದಿಲ್ಲ. ನಾನು ಹೇಳುವಂತೆ ದಿಃ 02.12.2023 ರಂದು ಬೆಳಿಗ್ಗೆ 7.35 ರಿಂದ 7.45 ಗಂಟೆ ಸಮಯದಲ್ಲಿ ತಿಪ್ಪಲಾಪುರ ರಸ್ತೆಯಲ್ಲಿ ಗಲಾಟೆ ನಡೆದಿಲ್ಲ ಎಂದರೆ ನಡೆದಿದೆ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದೆ. ಸಾಕ್ಷಿ ಮುಂದುವರಿದು ನನ್ನ ತಾಯಿಯನ್ನು ಆಸ್ಪತ್ರೆಯಲ್ಲಿ ದಾಖಲಿಸಿದ್ದೆ. ನಾನು ದಾಖಲಾಗಿರಲಿಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ನನಗೂ ಮತ್ತು ಚಾಸಾ–7 ರವರಿಗೂ ವೈಮನಸ್ಸು ಇಲ್ಲ.

ನನ್ನ ವಿರುದ್ಧ ಸಾಕಮ್ಮ ಎಂಬುವವರು ನೀಡಿದ ದೂರಿನ ಮೇರೆಗೆ ಇದೆ ನ್ಯಾಯಾಲಯದಲ್ಲಿ ಒಂದು ಪ್ರಕರಣ ಇದೆ ಎಂದರೆ ಸರಿ. ಸುಳ್ಳು ಆರೋಪಿಸಿದ್ದಾರೆ. ಆ ಪ್ರಕರಣದಲ್ಲಿ ನಾನು, ನನ್ನ ಪತ್ನಿ ಮತ್ತು ನನ್ನ ತಾಯಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇವೆ. ಆ ಪ್ರಕರಣದ ದೂರಿನ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಸದರಿ ಪ್ರಕರಣದ ಸಂಖ್ಯೆ ಸಿಸಿ ನಂ. 773/2024 ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ದಿಃ 02.12.2023 ರಂದು ಬೆಳಿಗ್ಗೆ 7.30 ಗಂಟೆಗೆ ನಾನು, ನನ್ನ ಪತ್ನಿ ಮತ್ತು ನನ್ನ ತಾಯಿ ಸದರಿ ಪ್ರಕರಣದ ದೂರುದಾರರಾದ ಸಾಕಮ್ಮರವರ ಮೇಲೆ ಹಲ್ಲೆ ಮಾಡಿದ್ದೇವೆ ಎಂದು ಆರೋಪಿಸಲಾಗಿದೆ ಎಂದರೆ ಸರಿ ಸುಳ್ಳು ದೂರು ಕೊಟ್ಟಿದ್ದಾರೆ. ಸದರಿ ಪ್ರಕರಣದ ಘಟನಾ ಸ್ಥಳ ರಂಗನಾಥ ಬಡಾವಣೆ ಹುಣಸೂರು ಎಂದರೆ ಸರಿಯಲ್ಲ. ನಾವು ಹಲ್ಲೆ ಮಾಡಿದ ಸಂಬಂಧ ಸಾಕಮ್ಮರವರಿಗೆ ಪೆಟ್ಟಾಗಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಗೆ ದಾಖಲಾಗಿದ್ದರು ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಬೆಳಿಗ್ಗೆ 7.30 ಗಂಟೆಗೆ ಸಾಕಮ್ಮರವರ ಮೇಲೆ ನಾವು ಹಲ್ಲೆ ಮಾಡಿ ನಂತರ ಬೆಳಿಗ್ಗೆ 7.35 ರಿಂದ 7.40 ಗಂಟೆಗೆ ನಾನು ಹೇಳುವ ಘಟನೆ ನಡೆದಿದೆ ಎಂದು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಬೆಳಿಗ್ಗೆ 7.30 ಗಂಟೆಗೆ ಸಾಕಮ್ಮರವರಿಗೆ ನಾವು ಹಲ್ಲೆ ಮಾಡಿ ಅವರು ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂದು ಗೊತ್ತಾದ ನಂತರ ನಾನು ರಾಜಕೀಯ ಪ್ರಭಾವ ಭೀರಿ ನಿಪಿ–1ರ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಿರುದ್ದ ಮಾನ್ಯ 8ನೇ ಹೆಚ್ಚುವರಿ ಸತ್ರ ನ್ಯಾಯಾಲಯದಲ್ಲಿ ಇನ್ನೊಂದು ಪ್ರಕರಣ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವು ನೀಡಿದ ದೂರಿನಲ್ಲಿ ಬಿ

ಅಂತಿಮ ವರದಿ ಸಲ್ಲಿಸಿ ನಮ್ಮ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಮಾನ್ಯ ಸತ್ರ ನ್ಯಾಯಾಲಯದಲ್ಲಿ ಇರುವ ಪ್ರಕರಣದಲ್ಲಿ ಈ ಪ್ರಕರಣದ 2ನೇ ಆರೋಪಿ ದೂರುದಾರರು ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ. ಸದರಿ ಪ್ರಕರಣದಲ್ಲಿ ನಾನು ಮತ್ತು ನನ್ನ ಸಹೋದರ ವೆಂಕಟೇಶ್ ಹಾಜರಾಗುತ್ತಿದ್ದೇವೆ.

ದಿಃ 02.12.2023ರ ನಂತರದಿಂದ ಇತ್ತಿಚೆಗೆ ನಾನು 2ನೇ ಆರೋಪಿಯನ್ನು ರಸ್ತೆಯಲ್ಲಿ ಹೋಗಿ ಬರುವಾಗ ನೋಡಿದ್ದೇನೆ. ಮಾನ್ಯ ಸತ್ರ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಇರುವ ಪ್ರಕರಣ ಐಪಿಸಿ ಕಲಂ 307ರ ಅಪರಾಧಕ್ಕಾಗಿ ಆಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಮತ್ತು ನನ್ನ ಅಣ್ಣ ವೆಂಕಟೇಶ್ ರವರು ಈ ಪ್ರಕರಣದ 2ನೇ ಆರೋಪಿಯ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದ್ದೆವೆ ಎಂದು ಆರೋಪ ಇದೆ ಎಂದರೆ ಸರಿಯಲ್ಲ . ಬೇರೆಯವರು ಮಾಡಿದ್ದನ್ನು ನಮ್ಮ ಮೇಲೆ ಹಾಕಿದ್ದಾರೆ. 2ನೇ ಆರೋಪಿ ಈಗ ಹಾಸಿಗೆಯಲ್ಲಿ ಇದ್ದಾರೆ ಎಂದರೆ ಗೊತ್ತಿಲ್ಲ. ನಾನು ಮತ್ತು ನನ್ನ ಅಣ್ಣ ವೆಂಕಟೇಶ್ 2ನೇ ಆರೋಪಿಗೆ ಮಾರಾಣಾಂತಿಕ ಹಲ್ಲೆ ಮಾಡಿದ್ದರಿಂದಾಗಿ ಅವರು ಈಗ ಓಡಾಡುವ ಸ್ಥಿತಿಯಲ್ಲಿ ಇಲ್ಲ ಎಂದರೆ ಗೊತ್ತಿಲ್ಲ. ನನ್ನ ಅಣ್ಣ ವೆಂಕಟೇಶ್ ರವರ ವಿರುದ್ಧ ಮೇಲೆ ಹೇಳಿದ ಪ್ರಕರಣವನ್ನು ಹೊರತುಪಡಿಸಿ ಇನ್ನೊಂದು ಐಪಿಸಿ ಕಲಂ 307 ಮತ್ತು 354(ಎ) ಪ್ರಕರಣ ಇದೆ ಎಂದರೆ ಇಲ್ಲ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಅಣ್ಣ ವೆಂಕಟೇಶ್ ಮಾನ್ಯ 4ನೇ ಹೆಚ್ಚುವರಿ ಸತ್ರ ನ್ಯಾಯಾಲಯ ಮೈಸೂರಿನಲ್ಲಿ ಹಾಜರಾಗುತ್ತಿದ್ದಾರೆ ಎಂದರೆ ಸರಿ. ಆರೋಪಿತರ ಮೇಲೆ ನಾನು ಮತ್ತು ನನ್ನ ಅಣ್ಣ ನಿರಂತರವಾಗಿ ದೌರ್ಜನ್ಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಆರೋಪಿತರ ಮೇಲೆ ಹೆಚ್ಚು ದೌರ್ಜನ್ಯ ಮಾಡುತ್ತಿರುವ ಕಾರಣದಿಂದಲೇ ಮೇಲೆ ಹೇಳಿದ ಪ್ರಕರಣಗಳನ್ನು ಆರೋಪಿ ನಮ್ಮ ವಿರುದ್ಧ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳನ್ನು ಮರೆಮಾಚಲು ನಾನು ಈ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ದೂರಿನಲ್ಲಿ ಆ ದಿನ ಬೆಳಿಗ್ಗೆ ವಾಕಿಂಗ್ ಹೋಗುತ್ತಿದ್ದ ಬಗ್ಗೆ ನಮೂದಿಸಿಲ್ಲ. ನಿಮ್ಮ ಮೇಲೆ 1ನೇ ಆರೋಪಿ ಹೊಂಡಾ ಶೈನ್ ವಾಹನದಿಂದ ಗುದ್ದಿಸಿದ ಬಗ್ಗೆ ದೂರು ಕೊಟ್ಟಿದ್ದಿರಾ ಎಂದರೆ ಇಲ್ಲ ಸಾಕ್ಷಿ ಮುಂದುವರಿದು ಆ ಘಟನೆ ನಡೆದ 5-10 ನಿಮಿಷದ ಒಳಗೆ ನಾನು

ಹೇಳಿದ ಉಳಿದ ಘಟನೆ ನಡೆದಿರುವುದರಿಂದ ಒಟ್ಟಿಗೆ ದೂರು ಕೊಟ್ಟಿದ್ದೇನೆ. ದಿಃ 02.12.2023 ರಂದು ಬೆಳಿಗ್ಗೆ 7.30 ಗಂಟೆಗೆ 1ನೇ ಆರೋಪಿ ತನ್ನ ವಾಹನದಿಂದ ನನಗೆ ಡಿಕ್ಕಿಪಡಿಸಿದ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1ನೇ ಆರೋಪಿ ವಾಹನದಿಂದ ನನಗೆ ಡಿಕ್ಕಿಪಡಿಸಿದ್ದನ್ನು ನೋಡಿದವರು ಯಾರು ಇಲ್ಲ. ವೈದ್ಯರ ಬಳಿ ಬೆಳಿಗ್ಗೆ 7.30 ಗಂಟೆಗೆ ಘಟನೆ ನಡೆದಿದೆ ಎಂದು ಹೇಳಿದ್ದಿರಾ ಎಂದರೆ ಇಲ್ಲ. ದಿಃ 02.12.2023 ರಂದು ಬೆಳಿಗ್ಗೆ 7.45 ಗಂಟೆಗೆ ನಾನು ಮತ್ತು ಮಕ್ಕಳು ಮನೆಯಲ್ಲಿದ್ದಾಗ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನುವ ಸಮಯದಲ್ಲಿ ನನ್ನ ಮಕ್ಕಳನ್ನು ಸೇರಿಸಿ 4 ಜನ ಇದ್ದೆವು. ನಾನು ಮನೆಯ ಒಳಗೆ ಇದ್ದೆ. ಮಕ್ಕಳು ಕಾಂಪೌಂಡ್ ಹೊರಗೆ ಆಟ ಆಡುತ್ತಿದ್ದರು. ನನ್ನದೂರಿನಲ್ಲಿ ಮಕ್ಕಳು ಕಾಂಪೌಂಡ್ ಹೊರಗೆ ಆಟ ಆಡುತ್ತಿದ್ದರು ಎಂದು ಹೇಳಿಲ್ಲ. ದಿಃ 02.12.2023 ರಂದು ಬೆಳಿಗ್ಗೆ 7.35 ರಿಂದ 7.40 ಗಂಟೆಗೆ ನನ್ನ ಮಕ್ಕಳು ಕಾಂಪೌಂಡ್ ಆಚೆ ಆಟ ಆಡುತ್ತಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 02.12.2023 ರಂದು ಬೆಳಿಗ್ಗೆ 7.35 ರಿಂದ 7.40 ಗಂಟೆಗೆ ಆರೋಪಿತರು ನನ್ನ ಮನೆಯ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ತಿಪ್ಪಲಾಪುರ ರಸ್ತೆಯಲ್ಲಿರುವ ನನ್ನ ಮನೆಯ ಮುಂದೆ ಇರುವ ಹೈಸ್ಕೂಲ್ ಕಾಂಪೌಂಡ್ ಹತ್ತಿರ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದರು. ಬೈದರು ಎಂದು ಹೇಳುವ ಯಾವ ದಿಕ್ಕಿಗೆ ನಿಮ್ಮ ಮನೆ ಬರುತ್ತದೆ ಎಂದರೆ ದಿಕ್ಕು ಹೇಳಲು ಆಗುವುದಿಲ್ಲ. ಆರೋಪಿತರು ಬೋಳಿ ಮಗನೇ, ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ನನಗೆ ಬೈದರುಎಂದು ಹೇಳುವ ಸಮಯದಲ್ಲಿ ನನ್ನ ಮಕ್ಕಳು ಮನೆಯಿಂದ ಆಚೆಗೆ ಕಾಂಪೌಂಡ್ ಹತ್ತಿರ ರಸ್ತೆಯಲ್ಲಿದ್ದರು. ಮನೆಯ ಮುಂದೆ ಇರಲಿಲ್ಲ ಎಂದರೆ ಮನೆಯ ಮುಂದೆ ಹೊರಗೆ ಇದ್ದರು. ಮಕ್ಕಳು ಮನೆಯ ಮುಂದೆ ಇದ್ದರುಎಂದು ದೂರಿನಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ಆರೋಪಿತರು ತಿಪ್ಪಲಾಪುರ ರಸ್ತೆಯಲ್ಲಿ ನನ್ನ ಮನೆಯ ಮುಂದೆ ಹೈ ಸ್ಕೂಲ್ ಕಾಂಪೌಂಡ್ ಪಕ್ಕ ನಿಂತುಕೊಂಡು ಕೊಲೆ ಬೆದರಿಕೆ ಹಾಕಿದರು. ಆರೋಪಿತರು ತಿಪ್ಪಲಾಪುರ ರಸ್ತೆಯ ಮೇಲೆ ನಿಂತು ನನಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿ. ತಿಪ್ಪಲಾಪುರ ರಸ್ತೆಯ ಉದ್ದ ಅಗಲ ಗೊತ್ತಿಲ್ಲ. ನಾನುಹುಟ್ಟಿದಾಗಿನಿಂದಲೂ ಅಲ್ಲಿಯೇ ವಾಸವಿದ್ದೇನೆ. ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಆ ರಸ್ತೆ ಹಾದುಹೋಗುತ್ತದೆ ಎಂದರೆ ದಿಕ್ಕುಗಳಲ್ಲಿ ಹೇಳಲು ಆಗುವುದಿಲ್ಲ. ನಾನು ಹೇಳುವ ಕಾಂಪೌಂಡ್ ನ ಯಾವ ದಿಕ್ಕಿಗೆ ಸಾಕಮ್ಮರವರ ಮನೆ ಬರುತ್ತದೆ ಎಂದರೆ ಗೊತ್ತಿಲ್ಲ. ತಿಪ್ಪಲಾಪುರ ರಸ್ತೆಯ ಯಾವ ದಿಕ್ಕಿಗೆ ಸಾಕಮ್ಮರವರ ಮನೆ ಬರುತ್ತದೆ ಎಂದು ಗೊತ್ತಿಲ್ಲ. ದಿಃ 02.12.2023 ರಂದು ಬೆಳಿಗ್ಗೆ 7.35

ರಿಂದ 7.40 ಗಂಟೆಯಲ್ಲಿ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದರು ಕೋಲೆ ಬೆದರಿಕೆ ಹಾಕಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ನನ್ನ ತಾಯಿಯನ್ನು ಆಸ್ಪತ್ರೆಗೆ ದಾಖಲಿಸಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ತಾಯಿಗೆ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಬೆದರಿಕೆ ಹಾಕಿದರು ಎಂದುಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಆರೋಪಿತರು ಜೋರಾಗಿ ತಳ್ಳಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ದೊಣ್ಣೆ ಮತ್ತು ಕಲ್ಲಿನಿಂದ ಗುದ್ದಿ ನೋವುಂಟು ಮಾಡಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಕತ್ತನ್ನು ಬಿಗಿಯಾಗಿ ಹಿಡಿದು ಉಸಿರುಗಟ್ಟಿಸಲು ಪ್ರಯತ್ನಿಸಿದರು ಹಾಗೂ ನನ್ನ ತಾಯಿ ಬಿಡಿಸಲು ಬಂದಾಗ ಅವರನ್ನು ಎಳೆದು ಬಲಗೈಗೆ ನುಲಿಚಿ ನೋವುಂಟು ಮಾಡಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 02.12.2023 ರಂದು ಮಧ್ಯಾಹ್ನ 12.15 ಗಂಟೆಗೆ ಚಾಸಾ-2 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ-1ರ ದೂರನ್ನು ನಾನು ಪೋಲೀಸ್ ಠಾಣೆಗೆ ಹೋಗಿ ನೀಡಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ತಾಯಿಯನ್ನು ಆಸ್ಪತ್ರೆಗೆ ದಾಖಲಿಸಿ ಔಷಧಿ ತರಲೆಂದು ಆಸ್ಪತ್ರೆಯ ಹೊರಗೆ ಬಂದಾಗ ಆರೋಪಿತರು ನನ್ನನ್ನು ಉದ್ದೇಶಿಸಿ ಪೋಲೀಸ್ ಠಾಣೆಗೆ ದೂರು ನೀಡಿದ್ದಿಯಾ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದು ಅವರ ತಲೆಯಿಂದ ನನ್ನ ತಲೆಗೆ ಮತ್ತು ಮುಖಕ್ಕೆ ಡಿಚ್ಚಿ ಹೊಡೆದು ನನ್ನ ತುಟಿಗೆ ಗಾಯ ಉಂಟು ಮಾಡಿದ್ದಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಸಿಸಿ 773/2024 ರಲ್ಲಿ ಸಾಕಮ್ಮ ರವರು ನನ್ನ ವಿರುದ್ದ ದೂರು ನೀಡಿದ್ದಾರೆ ಎಂಬ ಕಾರಣಕ್ಕಾಗಿ ನಾನು ಆರೋಪಿತರ ವಿರುದ್ದ ನಿಪಿ-1ರ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.